


International Journal of Kannada Research
www.kannadajournal.com

**ISSN: 2454–5813**
IJSR 2016; 2(3): 45-49
© 2016 IJKS
www.kannadajournal.com
Received: 12-04-2016
Accepted: 13-05-2016

**Dr. SH Kakhandaki**
Associat Professor
SECAB's A R S Inamdar Arts
Science & Commerce College for
Women, & P.G center,
Jalanagar, Vijayapura 586109.
Karnataka, India

**Correspondence**
**Dr. SH Kakhandaki**
Associat Professor
SECAB's A R S Inamdar Arts
Science & Commerce College for
Women, & P.G center,
Jalanagar, Vijayapura 586109.
Karnataka, India

# ಪೂರ್ಣಪ್ರಜ್ಞರ ದೃಷ್ಟಿಯಲ್ಲಿ ವಾಯು.

**Dr. SH Kakhandaki**

ವಿದ್ ಜ್ಞಾನೆ ಎಂಬ ಧಾತುವಿನಿಂದ ಹುಟ್ಟಿದ ವೇದ ಶಬ್ದವು ಜ್ಞಾನರಾಶಿ ಎಂಬರ್ಥವನ್ನಲ್ಲದೇ, "ವೇದೋ ಹಿ ಜ್ಞಾನ ಮೂಲಮ್ ತಥಾ ಧರ್ಮ ಮೂಲಮ್ ತಥಾ ವಿಜ್ಞಾನಮೂಲಮ್ ಚ" ಎಂಬ ಮಾತು ಸಾರ್ಥಕವಾಗಿದೆ. ಸಮಗ್ರ ವೇದಗಳನ್ನು ಸಂಹಿತಾ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂದು ವಿಭಾಗಿಸಿದಾಗ, ವೇದಗಳ ಕೊನೆ0ಯ ಭಾಗವಾದುದರಿಂದ ಉಪನಿಷತ್ತುಗಳಿಗೆ ವೇದಾಂತವೆಂದು ಹೆಸರು. ಈ ವೇದಾಂತ ಅಥವಾ ಉಪನಿಷತ್ತುಗಳಲ್ಲಿ ಆಖ್ಯಾನದೊಂದಿಗೆ ಆತ್ಮ ಪರಮಾತ್ಮ ಜೀವಾತ್ಮನ ಬಗ್ಗೆ ಚರ್ಚಿಸಲಾಗುತ್ತದೆ.

ಉಪನಿಷತ್ತು ಎಂಬ ಪದ ಉಪ ಮತ್ತು ನಿ ಎಂಬ ಉಪಸರ್ಗಗಳಿಂದ ಕೂಡಿದ್ದು, ಷದಲ್ಯಾ ಧಾತುವಿನಿಂದ ವ್ಯುತ್ಪತ್ತಿ0ಯನ್ನು ಪಡೆದಿದೆ. ಒಟ್ಟಿನಲ್ಲಿ ಉಪನಿಷತ್ತು ಎಂದರೆ ಗುರುಗಳ ಹತ್ತಿರದಲ್ಲಿ ಕುಳಿತು ಅಧ್ಯಾತ್ಮವಿದ್ಯೆ0ಯನ್ನು ಅಭ್ಯಸಿಸುವುದು ಎಂದರ್ಥ. ಉಪನಿಷತ್ತುಗಳು ಅನೇಕ ಇವೆ. ಆದರೆ ಇಂದು ಅಧ್ಯ0ಯನದಲ್ಲಿ ಬಹು ಮುಖ್ಯವಾಗಿ ಇರುವುದು ದಶೋಪನಿಷತ್ತು.

ಈ ಉಪನಿಷತ್ತುಗಳಿಗೆ ಶಂಕರ, ರಾಮಾನುಜ ಮಧ್ವ ಆಚಾ0ರ್ಯ ತ್ರ0ಯರು ಭಾಷ್ಯವನ್ನು ಬರೆದಿದ್ದು, ಲೌಕಿಕರಲ್ಲಿ0ಯೂ ಅನೇಕರು ತಮ್ಮ ಅಭಿಪ್ರಾ0ಯವನ್ನು ಮಂಡಿಸಿದ್ದಾರೆ. ಅವರಲ್ಲಿ ಆಚಾ0ರ್ಯ ಮಧ್ವರ ಪರಂಪರೆ0ಯಲ್ಲಿ ವಿಷ್ಣುವೇ ಸರ್ವೋತ್ತಮ. ಅವನೇ ಗಮ್ಯ ಗುರಿ, ಧ್ಯೇ0ಯ, ವಂದ್ಯ, ಅವನ ಪ್ರಸಾದಕ್ಕಾಗಿ0ಯೇ ಜೀವನದ ಸಾಧನೆ. ವಿಷ್ಣುವಿನ ನಂತರದ ಸ್ಥಾನ ಲಕ್ಷ್ಮಿ0ಯದು. ಇವಳ ಮೂಲಕವೇ ಭಗವಂತನಾದ ವಿಷ್ಣುವಿನ ಸಾಕ್ಷಾತ್ಕಾರ. ಇವರಿಬ್ಬರ ನಂತರದ ಸ್ಥಾನ ವಾ0ಯುದೇವನದು. ಇವನ ಕೃಪಾಬಲದಿಂದ ಇಂದ್ರಿ0ಯಗಳನ್ನು ನಿಗ್ರಹಿಸಿ, ಜಿತೇಂದ್ರಿ0ಯ ನೆನಿಸಿ ಲಕ್ಷ್ಮಿ0ಯ, ತದ್ವಾರಾ ವಿಷ್ಣುವಿನ ಅತ್ಯರ್ಥ ಪ್ರಸಾದವೇ ಪರಮಪದ ಸೋಪಾನ ಮುಕ್ತಿ. ಇಂತಹ ವಾ0ಯುವಿನ ಉಪನಿಷತ್ತುಗಳಲ್ಲಿ ಬಂದಿರುವ ನಾಮಗಳ ವೈಶಿಷ್ಟ್ಯವನ್ನು ಶ್ರೀಮಧ್ವಾಚಾ0ರ್ಯರು ತಮ್ಮ ಉಪನಿಷತ್ತುಗಳ ಭಾಷ್ಯದಲ್ಲಿ ಬಹು ಸುಂದರವಾಗಿ ವಿವರಿಸಿದ್ದಾರೆ. ಅವುಗಳನ್ನು ಅವಲೋಕಿಸೋಣ.

ಶ್ರೀಹರಿಯ ಅತ್ಯಂತ ಪ್ರೀತಿಗೆ ಪಾತ್ರನಾದವನು ವಾಯುದೇವ. ಆದುದರಿಂದಲೇ ಶ್ರೀಹರಿಗೆ ವಾಯುದೇವನು ಸರ್ವ ದೇವತೆಗಳಿಗಿಂತಲೂ ಉತ್ತಮನಾದವನು–ಎಂಬ ತಿಳುವಳಿಕೆ ಅತ್ಯಂತ ಪ್ರಿಯವಾದುದು.

> ಸರ್ವದೇವೋತ್ತಮೋ ವಾಯುರಿತಿ ಜ್ಞಾನಾನ್ನಚಾಪರಂ ।
> ಪ್ರಿಯಮಸ್ತಿ ಹರೇಃ ಕಿಂಚಿತ್ ತಥಾ ವಾಯೋರ್ಹರೇರ್ವಿದಃ। ಭಾ,ತಾ,ನ,.11.11.43

ವಾಯೌ ಮುಖ್ಯಧಿಯಾ–ಆದುದರಿಂದಲೇ ಶ್ರೀಕೃಷ್ಣನು ತನ್ನನ್ನು ಯಾವ ಯಾವ ಪ್ರತೀಕದಲ್ಲಿ ಹೇಗೆ ಹೇಗೆ ಪೂಜಿಸ ಬೇಕೆಂದು ತಿಳಿಸುತ್ತ ವಾಯು ಪ್ರತೀಕದಲ್ಲಿ. ಅಂತಹ ವಾಯುದೇವನು ಉಳಿದೆಲ್ಲ ದೇವತೆಗಳಿಗಿಂತ ಉತ್ತಮನಾದವನು ಎಂಬ ಪ್ರಜ್ಞೆಯನ್ನು ಅಳವಡಿಸಿಕೊಂಡು ತನ್ನನ್ನು ಆರಾಧಿಸಬೇಕೆಂದು ಸಂದೇಶಿಸಿರುವನು.

ವಾಯೌ ದೇವತಾಯಾಂ ಮುಖ್ಯಧಿಯಾ ವಾಯುಃ ಸರ್ವದೇವೋತ್ತಮ
ಇತಿ ಬುಧ್ಯಾ ಮಾಂ ತತ್ರ ಪೂಜಯೇತ್ ॥ ಭಾ,ತಾ,ನಿ,ಟೀ

ಹೀಗೆ ತನ್ನ ಆರಾಧನೆಯಲ್ಲಿ ವಾಯುವಿನ ದೇವೋತ್ತಮತ್ವ ಜ್ಞಾನವನ್ನು ಆವಿಭಾಜ್ಯ ಅಂಗವನ್ನಾಗಿ ಪರಿಗಣಿಸುವುದರ ಮೂಲಕ ಆ ಜ್ಞಾನ ತನಗೆ ಅತ್ಯಂತ ಪ್ರಿಯವಾದುದೆಂದು ಶ್ರೀಕೃಷ್ಣ ಸೂಚ್ಯವಾಗಿ ಸಂದೇಶಿಸಿರುವನು. ವಾಯೌ ಮುಖ್ಯಧಿಯಾ–ಎಂಬ ಕೃಷ್ಣನ ಸಂದೇಶದ ಮತ್ತೊಂದು ಅಭಿಪ್ರಾಯ ಹೀಗಿದೆ–ಸಕಲ ಜಗತ್ತಿಗಿಂತಲೂ ಉತ್ತಮನಾಗಿರುವ, ವಾಯುದೇವನಿಗಿಂತಲೂ ಉತ್ತಮನಾದವನು

ಭಗವಂತನು ಎಂಬ ಅನುಸಂಧಾನವನ್ನು ಅಳವಡಿಸಿಕೊಂಡು ವಾಯು ಪ್ರತೀಕದಲ್ಲಿ ಭಗವಂತನನ್ನು ಆರಾಧಿಸಬೇಕು–ಎಂಬುದಾಗಿ. ಈ ಬಗೆಯ ಅನುಸಂಧಾನದಿಂದ ಭಗವಂತನು ಅತ್ಯಂತ ಪ್ರಿಯನಾಗುವನೆಂದು 'ಪ್ರಧ್ಯಾನ' ಎಂಬ ಗ್ರಂಥ ಸ್ಪಷ್ಟೀಕರಿಸಿದೆ.

> ಯಸ್ಮಾದ್ವಾಯೌ ಸ್ಮೃತೋ ವಿಷ್ಣುಃ ವಾಯೋರ್ಮುಖ್ಯತಯಾಖಿಲಾತ್ ।
> ಸ್ವಸ್ಯಮುಖ್ಯತಯಾ ತಸ್ಮಾತ್ ಪರಾಂ ತುಷ್ಟಿಂ ಗಮಿಷ್ಯತಿ ॥
> ಛಾಂ,ಉಪ,ಭಾ1,2,1

**ಸೂತ್ರಾತ್ಮಾತೂಚ್ಯತೇ:** ಶ್ರೀವಿಷ್ಣುವನ್ನೇ ಪ್ರತಿಪಾದಿಸ ಹೊರಟ ಉಪನಿಷತ್ತಿನಲ್ಲೂ 'ಸೂತ್ರ'ಎನಿಸುವ ವಾಯುದೇವನ ಪ್ರಸ್ತಾವ ಅಲ್ಲಲ್ಲಿ ಬಂದಿರುವಂತಹದ್ದು ಈ ಉದ್ದೇಶದಿಂದಲೇ. ಅಂದರೆ ವಾಯುದೇವನಿಗಿಂತಲೂ ವಿಶಿಷ್ಟನಾದವನು ಶ್ರೀವಿಷ್ಣು ಎಂದು ಸಮರ್ಥಿಸುವುದಕ್ಕಾಗಿ. ಹಾಗೆಯೇ ಉತ್ತಮ ಪ್ರತೀಕವೆನಿಸಿರುವ ವಾಯುದೇವನಲ್ಲಿ ಶ್ರೀವಿಷ್ಣುವಿನ ಉಪಾಸನೆಯನ್ನು ನಡೆಸುವುದಕ್ಕಾಗಿಯಷ್ಟೇ ಅವನ ಉಪಾಸನೆಯನ್ನೂ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ತಿಳಿಸಿರುವುದು.

> ಅರಣ್ಯಕೇಷ್ವೃತೆ ವಿಷ್ಣುಂ ನೈವಾನ್ಯತ್ ಕಿಂಚಿದುಚ್ಯತೆ । ಸೂತ್ರಾತ್ಮಾ ತೂಚ್ಯತೆ।
> ವಿಷ್ಣೋಸ್ತದ್ವಿಶಿಷ್ಟತ್ವ ವಿತ್ತಯೇ । ಕುತ್ರಚಿತ್ ತದುಪಾಸ್ತಿಶ್ಚ ತಸ್ಯಾದ್ಯರ್ಥತನುತ್ವತಃ ।

ತಸ್ಮಿನ್ ವಿಷ್ಣೋರುಪಾಸ್ತ್ಯರ್ಥಂ ನಾನ್ಯಥಾ ಕಿಂಚಿದುಚ್ಯತೆ । ಛಾಂ,ಉಪ,ಭಾ,3,1,1.

ತೈತ್ತಿರೀಯೋಪನಿಷತ್ತು ಪ್ರಸ್ತುತಪಡಿಸುವ ಶಾಂತಿಪಾಠದಲ್ಲಿ ಪ್ರಣತನಾದ ವಾಯುದೇವನನ್ನು ಸಂಬೋಧಿಸಿ, ಪರಬ್ರಹ್ಮನ ಪ್ರತೀಕನನ್ನಾಗಿ ಅವನನ್ನು ಪ್ರತಿಪಾದಿಸುವ ಪ್ರತಿಜ್ಞೆಯನ್ನು ಕೈಗೂಂಡಿರುವುದಿದೆ.

ನಮಸ್ತೇ ವಾಯೋ–––––ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ । ತೈ, ಉಪ 1. 1.

ಹೀಗೆ ಪ್ರತಿಪಾದಿಸಲ್ಪಟ್ಟಿರುವ ಪ್ರಾಣನನ್ನು ತಿಳಿದುಕೊಂಡಲ್ಲಿ ನಿಶ್ಚಿತವಾಗಿ ಸಂಸಾರದಿಂದ ಮುಕ್ತಿಯನ್ನು ಹೊಂದಬಲ್ಲನೆಂದು ತಿಳಿಸುವ ಪ್ರಮಾಣದಲ್ಲಿ, ಪ್ರಾಣನ ತಿಳುವಳಿಕೆ ಹೇಗೆ ಮುಕ್ತಿ ಸಾಧನವಾಗಬಲ್ಲದೆಂಬಂದನ್ನು ಸಮರ್ಥಿಸುತ್ತ, ಪ್ರಾಣನನ್ನೂ ತಿಳಿಯುವವನು ಅಂತತಃ ವಿಷ್ಣುವನ್ನೂ ತಿಳಿದಿರಲೇ ಬೇಕಾಗುತ್ತದೆ, ಯಾಕೆಂದರೆ ವಿಷ್ಣುವನ್ನು ಪ್ರಾಣನಿಗಿಂತ ಉತ್ತಮ ನನ್ನಾಗಿಯೂ, ರುದ್ರಾದಿ ಉಳಿದ ಜೀವರನ್ನು, ಪ್ರಾಣನಿಗಿಂತ ಕೆಳ ಮಟ್ಟದವರನ್ನಾಗಿಯೂ ಯಾರು ತಿಳಿಯುವನೋ ಅವನಷ್ಟೇ ಪ್ರಾಣನನ್ನು ಸರಿಯಾಗಿ ತಿಳಿದವನೆನಿಸಬಲ್ಲ ಎಂದು ಪ್ರತಿಪಾದಿಸುವ ಮೂಲಕ ಪ್ರಾಣನ ಜ್ಞಾನದಲ್ಲಿ ವಿಷ್ಣು ಸರ್ವೋತ್ತಮತ್ವದ ಅಂಶವೂ, ಪ್ರಾಣನ ಜೀವೋತ್ತಮತ್ವದ ಅಂಶವೂ ಅಡಕವಾಗಿರುವುದೆಂದು ಸೂಚಿಸಲಾಗಿದೆ.

> ಏತಂ ವಿದಿತ್ವಾ ಸಂಸಾರಾನ್ಮುಕ್ತಿಮೇಷ್ಯತ್ಯಸಂಶಯಂ ।
> ವಿಷ್ಣುಮಪ್ಯಂತತೋ ವೇತ್ತಿ ಪ್ರಾಣವೇತ್ತಾ ಯತಃ ಸ್ಫುಟಂ ।
> ಪ್ರಾಣಾತ್ ಪರಂ ತು ಯೇ ವಿಷ್ಣುಂ ಜೀವಾಂಶ್ಚೈವಾವರಾಂಸ್ತತಃ ॥
> ಯೇ ವಿದುಸ್ತೆ ವಿದಃ ಪ್ರಾಣಂ ನಾನ್ಯಥಾ ತು ಕಥಂಚನ ॥ಛಾಂ, ಉಪ, ಭಾ, 1, 2, 1.

ಪ್ರಾಣನನ್ನು ತಿಳಿಸ ಹೊರಟ ಉಪನಿಷತ್ತುಗಳಲ್ಲಿಯೂ ಈ ಎರಡು ಅಂಶಗಳಿಗೆ–ಅಂದರೆ ಪ್ರಾಣನಿಗಿಂತಲೂ ಉತ್ತಮನಾಗಿರುವವನು ಶ್ರೀವಿಷ್ಣು; ಅವನ ಅನುಗ್ರಹದಿಂದ ರುದ್ರಾದಿ ಜೀವರಿಗಿಂತೆಲ್ಲ ಉತ್ತಮನಾಗಿರುವವನು ಪ್ರಾಣದೇವ–ಎಂಬ ಈ ಅಂಶಗಳಿಗೆ ಒತ್ತುಕೊಟ್ಟೇ ಪ್ರಾಣದೇವನ ಗುಣ, ಧರ್ಮಗಳನ್ನು, ಮಹಿಮೆಗಳನ್ನು, ರೂಪಗಳನ್ನು ಪ್ರತಿಪಾದಿಸಲಾಗಿದೆ–ಎಂಬುದನ್ನು ಇಟ್ಟುಕೊಂಡು, ಉಪನಿಷತ್ತು ಪ್ರಸ್ತುತಪಡಿಸುವ ಪ್ರಾಣದೇವನ ವ್ಯಕ್ತಿತ್ವವನ್ನು ಅಲ್ಲಲ್ಲಿ ಉಲ್ಲೇಖಿಸಲ್ಪಟ್ಟ ಅವನ ನೂರಹತ್ತು ನಾಮಗಳಿಗೆ ಸಂಬಧಪಡುವಂತೆ ಈ ಎರಡು ಅಂಶಗಳಿಂದ ಪರಿಶೀಲಿಸ ಬಹುದಾಗಿದೆ.

ಪ್ರಾಣನಿಗಿಂತ ಉತ್ತಮ ಶ್ರೀವಿಷ್ಣು:

"ದಿಶಾಂ ವತ್ಸ" 'ಸಂವತ್ಸರ'–ಎಂಬ ನಾಮಗಳು ಭಗವಂತನ ಸಾಕ್ಷಾತ್ ಸುಪುತ್ರ ನೆನಿಸಿರುವವನು ಪ್ರಾಣದೇವ ಎಂದು ತಿಳಿಸುತ್ತಿವೆ.

> ದಿಙ್ ನಾಮಾನಶ್ಚ ತೇ ಪ್ರೊಕ್ತಾ ಧರ್ಮಜ್ಞಾನಾದಿ ದೇಶನಾತ್ ।
> ತೇಭ್ಯೋ ಜಾತೋ ಮಹಾವಾಯುರ್ದಿಶತಾಂ ವತ್ಸಸ್ತತಃ ಸ್ಮೃತಃ ॥ ಛಾಂ, ಉಪ, ಭಾ.
> ವಾಯುಃ ಸಂವತ್ಸರಃ ಪ್ರೋಕ್ತೋ ವತ್ಸೋ ವಿಷ್ಣೋರಸೌ ಯತಃ ।
> ಸಮ್ಯಗೇವ ರತಿಂ ಯಾತಿ । ಬೃ, ಉ, ಭಾ

**"ಅನಿಲಮ್** – ಅಃ ಬ್ರಹ್ಮೈವ ನಿಲಯನಂ ಯಸ್ಯ ವಾಯೋಃ ಸೋಽನಿಲಂ । ಈ, ಉಪ 2, 3. ವಾಯುರನಿಲಮಮೃತಂ । ಬೃ, ಉಪ, 7, 20, 3.

**'ಪರಾಯಣಮ್'–** ಇಂದ್ರಾದ್ಯಪೇಕ್ಷಯಾ ಪರಾಃ ಉತ್ತಮಾಃ ಶೇಷಾದಯಸ್ತೇಷಾಮಪಿ ಅಯನಂ ಪರಾಯಣಂ । ಪರಂ ಮುಖ್ಯಂ ಚ ತತ್ ಅಯನಂ ಚ ಪರಾಯಣಂ । ವಿಶ್ವರೂಪಂ ಕರಿಣಂ ಜಾತವೇದಸಂ ಪರಾಯಣಮ್ । ಷಟ್, ಉಪ, 1, 1, 10.

ಎಂಬ ನಾಮಗಳು ಯಾವಾಗಲೂ ಭಗವಂತನನ್ನೇ ಆಶ್ರಯಿಸಿಕೊಂಡಿರುವವನು ಪ್ರಾಣದೇವನು ಎಂದು ತಿಳಿಸುವವು.

'ಮಾತರಿಶ್ವನ್' ಎಂಬ ನಾಮವು ಭಗವಂತನ ವಿಷಯದಲ್ಲಿ ಪ್ರಾಣದೇವನ ಜ್ಞಾನಸಮೃದ್ಧಿಯನ್ನು ತಿಳಿಸಿಕೊಟ್ಟಿದೆ,

ಮಾತರಿ ನಿರ್ಮಾತರಿ ಜಗನ್ನಿರ್ಮಾತೃ ವಿಷಯೇ ಶ್ವಯತಿ ಅವಗಚ್ಛತೀತಿ ಮಾತರಿಶ್ವಾ ।

ಮಾಪಯತಿ ಜ್ಞಾಪಯತಿ ಇತಿ ಮಾತಾ,ವಿದ್ಯಾ,ವಚೋ ಮಾ ಮಾತರಃ ಸ್ಮೃತಾಃ ।

ತೇ ಪ್ರೀತಾಃ ಪ್ರಾಣಂ ಸ್ತುವಂತಿ ...____ಮಾತರಿಶ್ವನಃ । ಷಟ್ಪ್ರಶ್ನ, ಉಪ 2, 1, 15.

'ವಿಶ್ವಂಭರ' ವಿಶ್ವಂ ಬಿಭರ್ತಿ ಧಾರಯತಿ ಪೋಷಯತೀತಿ ಚ ವಿಶ್ವಂಭರಃ । ಬೃ, ಉಪ।

"ಸ್ವರ""ಪ್ರತ್ಯಾಸ್ವರ"–ಎಂಬ ನಾಮಗಳು ಭಗವಂತನನ್ನು ಯಾವಾಗಲೂ ಅನುಸಂಧಾನ ಮಾಡುತ್ತ ತನ್ನ ಹೃದಯದಲ್ಲಿ ಹೊತ್ತು ಕೊಂಡಿರುವವನು, ಅವನಲ್ಲಿಯೇ ಆಸಕ್ತನಾಗಿರುವವನು ಪ್ರಾಣದೇವನೆಂದು ಅವನ ಭಕ್ತಿಮಯ ವ್ಯಕ್ತಿತ್ವವನ್ನು ಸೂಚಿಸಿಕೊಡುವುದು.

> ಉದ್ಗಾತೃ ಸ್ವರಸನ್ನಿಹಿತತ್ವಾಚ್ಚ ಸ್ವರಃ । ವಾಯುಃ ಪ್ರಾಣಃ ಶರೀರಗಃ ।
> ಸ್ವೇ ವಿಷ್ಣೌ ರಮಯತ್ಯೇನಂ ಜೀವಂ ತಸ್ಮಾತ್ ಸ್ವರಃ ಸ್ಮೃತಃ । ಛಾಂ, ಉಪ, ಭಾ।

ಆ ಸಮಂತಾತ್ ಮಾಂ ಪ್ರತಿ ಮಾಂ ಪ್ರತೀತಿ ಪ್ರತಿ ಪುರುಷಾಭಿಮುಖ್ಯೇನ
ಸ್ಥಿತ ಮಂಡಲಸ್ಥತ್ವಾತ್ ಸ್ವೇ ವಿಷ್ಣೌ ರತತ್ವಾಚ್ಚ ಪ್ರತ್ಯಾಸ್ವರ ಇತ್ಯಾಚಕ್ಷತೆ । ಛಾಂ, ಉಪ, ಖಂಡಾರ್ಥೆ.

ಹೀಗೆ ಐದಾರು ನಾಮಗಳು–ಪ್ರಾಣದೇವ ವಿಷ್ಣುವಿನ ಪುತ್ರ, ಅವನನ್ನು ಆಶ್ರಯಿಸಿ ಕೊಂಡಿರುವವನು, ಅವನ ಭಕ್ತ–ಮುಂತಾದ ಗುಣಗಳನ್ನು ತಿಳಿಸುವುದರ ಮೂಲಕ ಶ್ರೀವಿಷ್ಣು ಪ್ರಾಣದೇವನಿಗಿಂತಲೂ ಎಷ್ಟು ಎತ್ತರದಲ್ಲಿರುವನೆಂಬುದನ್ನು ಸೂಚಿಸಿ ಕೊಡಬಲ್ಲವು.

ರುದ್ರಾದಿಗಳಿಗಿಂತ ಉತ್ತಮ ಪ್ರಾಣದೇವ: –ದಶೋತ್ತರ ಶತನಾಮಗಳಲ್ಲಿಯ ಉಳಿದ ನಾಮಗಳು ಬೇರೆ ಬೇರೆ ಬಗೆಯಿಂದ ಪ್ರಣದೇವ ರುದ್ರಾದಿಗಳನ್ನೊಳಗೊಂಡ ಸಮಸ್ತ ಜಗತ್ತಿನಲ್ಲಿ ಉತ್ತಮನಾದವನೆಂಬುದನ್ನು ಸಾರುತ್ತಿವೆ. ಶ್ರೇಷ್ಠ, ಜ್ಯೇಷ್ಠ, ಅಧ್ಯರ್ದ್ಧ, ಪರಾರ್ಧ, ಬಹ್ಮ, ಬೃಹತೀ, ವಿಶ್ವ, ವಶ್ವರೂಪ, ಆಪಃ, ತೇಜೋರಸ, ವಸಿಷ್ಠ, ಇಂದ್ರ, ಈಶಾನ, ಐಶ್ವರ್ಯಾತ್ಮಾ, ಸತ್ಯ–ಮುಂತಾದ ನಾಮಗಳು ಪ್ರಾಣದೇವನ ಉತ್ತಮತ್ತ್ವವನ್ನು ಗುಣ ಪೂರ್ಣತ್ವವನ್ನು, ಸಾಮರ್ಥ್ಯವನ್ನು ಸಾರುತ್ತ ರುದ್ರಾದಿಗಳಿಗಿಂತೆಲ್ಲ ಉತ್ತಮನಾದವನು ಪ್ರಾಣದೇವ ನೆಂಬುದನ್ನು ನೇರವಾಗಿ ಪ್ರತಿಪಾದಿಸುತ್ತಿವೆ.

ಸರ್ವ ಸಾಧು ಗುಣತ್ವಾತ್ತು ವಾಯುಃ ಸತ್ಯ ಇತೀರ್ಯತೇ । ಸತ್ಯಸ್ಯ ಸತ್ಯಂ । ಐ, ಉಪ, 2, 2, 7, 2.

ಮತ್ತೆ ಕೆಲವು ನಾಮಗಳು ಪ್ರಾಣದೇವನ ಅಸಾಧಾರಣ ಗುಣಗಳಾದ ಪ್ರೇರಕತ್ವ, ಪ್ರಾಣಾಧಾರತ್ವ, ಬಲ ಸಂಪತ್ತು, ಜ್ಞಾನಸಂಪತ್ತು, ಪವಿತ್ರೀಕರಣ, ದೇಹಕಾರ್ಯ ನಿರ್ವಾಹ, ಬ್ರಹ್ಮಾಂಡಕಾರ್ಯ ನಿರ್ವಾಹ – ಮುಂತಾದವುಗಳನ್ನು ಪ್ರತಿಪಾದಿಸುವ ಮೂಲಕ ಅವನು ರುದ್ರಾದಿಗಳಿಗಿಂತ ಹೇಗೆ ಉತ್ತಮ ನಾಗಿರುವನೆಂಬುದನ್ನು ಪರೋಕ್ಷವಾಗಿ ಸಮರ್ಥಿಸುವವು. ಅಗ್ನಿ, ಅನ, ಆತ್ಮಾ, ಪ್ರಾಣ, ಈರ, ಪ್ರತ್ಯಕ್ಷ –ಇತ್ಯಾದಿ ನಾಮಗಳು ಅವನ ಪ್ರೇರಕತ್ವ ಧರ್ಮವನ್ನು ಸಾರುತ್ತಿವೆ.

ಅಕ್ಷೇಷು ಪ್ರತಿ ಪ್ರತಿ ಸ್ಥಿತತ್ವಾದನಃ ಪ್ರತ್ಯಕ್ಷಂ ।

ತದ್ವಾ ಎತದನಸ್ಯಾನ್ನಮನೋ ಹ ವೈ ನಾಮ ಪ್ರತ್ಯಕ್ಷಂ । ಛಾಂ ಉಪ 5, 1, 12.

"ಅನ್ನ, ಪ್ರಾಣ, ಅಸು, ಅನ್ನಾಯು, ಅನ್ನಸ್ಯಗ್ರಹ, ಕ್ಷತ್ರ11–ಮುಂತಾದ ನಾಮಗಳು ಅವನ ಪ್ರಾಣಾಧಾರತ್ವವನ್ನು ತಿಳಿಸುತ್ತಿವೆ,

ಜೀವಂ ಕ್ಷತಾತ್ ತ್ರಾಯತೇ ಇತಿ ಕ್ಷತ್ರಂ ।

ಪ್ರಣೋ ವೈ ಕ್ಷತ್ರಂ ಪ್ರಾಣೋ ಹಿ ವೈ ಕ್ಷತ್ರಂ ತ್ರಾಯತೇ

ಹೈನಂ ಪ್ರಾಣಃ ಕ್ಷಣಿತೋ ಪ್ರಕ್ಷತ್ರಮತ್ರಮಾಪ್ನೋತಿ

ಕ್ಷತ್ರಸ್ಯ ಸಾಯುಜ್ಯಂ ಸಲೋಕತಾಂ ಜಯತಿ ಯ ಏವಂ ವೇದ । ಬೃ, ಉಪ.7, 18, 1.

ಸಾಯಂ, ಪ್ರಾಣ, ಅಪಾನ, ವ್ಯಾನ, ಉದಾನ, ಆಯಾಸ್ಯ –ಇತ್ಯಾದಿ ನಾಮಗಳು ಜೀವಾತ್ಮರ ಶರೀರದಲ್ಲಿ ಅವನಿಂದ ನಡೆಯುವ ಕಾರ್ಯನಿರ್ವಹಣೆಯ ವೈಭವವನ್ನು ತಿಳಿಸುವವು.

ಆಸ್ಯಾತ್ ಮುಖಾತ್ ಅಯತೇ ಗಚ್ಛತೀತಿ ಆಸ್ಯಾಯುಃ ।

ಆಸ್ಯಾಯ ಎವ ಅಯಾಸ್ಯಃ । ತಂ ಹಯಾಸ್ಯ ಉದ್ಗೀಥಮುಪಾಸಾಂಚಕ್ರೇ

ಏತಂ ಎವಾಯಸ್ತಂ ಮನ್ಯಂತ ಅಸ್ಯಾದ್ಯದಯತೇತೇನ । ಛಾಂ, ಉಪ 1,2,2.

ಜ್ಞಾನ, ಧರ್ಮ, ಏಕಋಷಿ, ಜಾತವೇದಸ್, ಸವಿತಾ, ಅಹ,ಅಮೃತ, ಅಮರ್ತ್ಯ, ದೇವ –ಇತ್ಯಾದಿ ನಾಮಗಳು ಅವನ ಜ್ಞಾನ ಸಂಪತ್ತನ್ನು ತಿಳಿಸುತ್ತಿದ್ದರೆ,

ದೀವ್ಯತಿ ಅವಾಗಚ್ಛತಿ ಭಗವದಿತರತ್ರ ಸರ್ವಂ ಆಲೋಚನಾಪೂರ್ವಕಮಿತಿದೇವಃ ।

ದೇವೌ ವಿಷ್ಣುಶ್ಚ ವಾಯುಶ್ಚ ಸರ್ವಜ್ಞತ್ವಾತ್ ಕ್ರಮೇಣ ತು । ಛಾಂ,ಉಪ 1,3,16.

ಬಲಂ, ಇಂದ್ರ, ಈಶಾನ, ವಾಯು, ಪ್ರಾಣ –ಇತ್ಯಾದಿ ನಾಮಗಳು ಅವನ ಬಲ ಸಂಪತ್ತನ್ನು ತೋರಿಸಿಕೊಡುತ್ತಿವೆ. ದೈತ್ಯರ ಆಕ್ರಮಣಕ್ಕೆ ಒಳಗಾಗದೆ, ಪಾಪಕ್ಕೆ ತುತ್ತಾಗದೆ ಪವಿತ್ರನಾಗಿರುವ, ತನ್ನ ಉಪಾಸಕರನ್ನು ಪವಿತ್ರೀಕರಿಸುವ ಅವನ ಆ ಬಗೆಯ ವ್ಯಕ್ತಿತ್ವ ಅಮೂರ್ತ ಆಖಣಾಶ್ಮಸಮ, ದುರ್, ಪವಮಾನ, ಶುಚಿ–ಮುಂತಾದ ನಾಮಗಳಿಂದ ಸೂಚಿಸಲ್ಪಡುವವು.

ಸರ್ವಚೇಷ್ಟಯಿತೃತ್ವಾತ್ತು ಪ್ರಾಣಃ ।

ಪ್ರಾಣಂ ಬಲಂ ತದಭಿಮಾನಿತ್ವಾತ್ ಪ್ರಾಣಃ । ಭಾಗ, ತಾ, ನಿ 2, 5, 15.

ಶೋಚತಿ ಭಗವತ್ಸ್ವರೂಪಂ ಪ್ರಕಾಶಯತೀತಿ ಶುಚಿಃ । ಭಾಗ, ।

ಹಂಸಃ ಶುಚಿಷದ್—ಕಾ, ಉಪ 2, 2, 2.

"ಸವಿತಾ" ಉಕ್ಥಮ್' ಮುಂತಾದ ನಾಮಗಳು ವಾಯುದೇವನ ಜಗತ್ಪ್ರಪ್ರವೃತ್ತವನ್ನು ತಿಳಿಸಿದರೆ

ಉತ್ಥಾಪನಾದುಕ್ಥನಾಮಾ–––ವಾಯುರೇವ ಜಗತ್ಪತಿಃ । ಬೃ, ಉಪ, ಭಾ

ಉಚ್ಚೈಃ ಸ್ಥಿತತ್ವಾದುಕ್ಥೋಽಭೂದ್ವಾಯುರೇವ ತತಃ ಪ್ರಭುಃ ।

ಉಚ್ಚತ್ವಂ ಚ ಗುಣಾಧಿಕ್ಯಂ ತ್ವಮುಚ್ಚೋಽಸೀತಿ ತೇಽಬ್ರುವನ್ । ಐ, ಉಪ, ಭಾ

ಧರ್ಮ, ವಂಶ, ಕೂರ್ಮರೂಪ, ಸರ್ವಧಾತಮ, ಉತ್, ಪ್ರಜಾಪತಿ, ಪ್ರತಿಷ್ಠ–ಇತ್ಯಾದಿ ನಾಮಗಳು ಅವನ ಜಗದ್ಧಾರಕ ತ್ವವನ್ನು ಪ್ರತಿಪಾದಿಸುವವು

ಪ್ರತಿಷ್ಠಾ ಸುಭದ್ರಸ್ಥಿತಿ ಹೆತುಃ । ಅಥ ಹೈನಂ ಚಕ್ಷುರುವಾಚ ಯದಹಂ

ಪ್ರತಿಷ್ಠಾಸ್ಮಿ ತ್ವಂ ತತ್ ಪ್ರತಿಷ್ಠೋಽಸಿ ಇತಿ । ಛಾಂ,ಉಪ5,1,10.ತಥಾ ಬೃ,ಉಪ5,110.

'ವಿಶ್ವಸ್ಯ ಅತ್ತಾ' 'ಸಂವರ್ಗ' 'ಮೃತ್ಯು'–ಮುಂತಾದ ನಾಮಗಳು ಅವನ ಜಗತಸಂಹಾರಕತ್ವವನ್ನು ಸಾರುವವು.

ಮಾರಯತೀತಿ ಮೃತ್ಯುಃ । ಮೃತ್ಯುರಪಾನೋ ಭೂತ್ವಾ ನಾಭಿಂ ಪ್ರಾವಿಶತ್ । ಐ, ಉಪ. 2, 3, 2.

"ದೈವಃ ಪ್ರಾಣಃ" 'ಧರ್ಮ' 'ರುದ್ರ'–ಮುಂತಾದ ನಾಮಗಳು ಮೋಕ್ಷ ಪ್ರಾಪ್ತಿಯ ವಿಷಯದಲ್ಲಿ ಅವನ ಪಾತ್ರವನ್ನು ಸೂಚಿಸುತ್ತಿವೆ.

ರುಜಾಂ ದ್ರವಣತೋ ರುದ್ರೋ ವಾಯುಃ । ಋಗ್ಭಾಷ್ಯ 2, 1, 10.

ರೋದಯತಿ ದುಷ್ಟಾನಿ ಇತಿ ರುದ್ರಃ । ತೇ ಪ್ರೀತಾಃ ಪ್ರಾಣಂ ಸ್ತುವಂತಿ ತ್ವಮ್

ರುದ್ರೋಽಸಿ ಪರಿರಕ್ಷಿತಾ ॥ ಷಟ್ಪ್ರಶ್ನ. ಉಪ 2, 1, 13.

ಆಕಾಶ, ಆದಿತ್ಯ, ಅಪ, ಪರ್ಜನ್ಯ, ಸ್ತನಯಿತ್ನುಃ ಇತ್ಯಾದಿ ನಾಮಗಳು ಬ್ರಹ್ಮಾಂಡದ ಚಟುವಟಿಕೆಗಳಲ್ಲಿ ಅವನ ಪಾತ್ರವನ್ನು ಸೂಚಿಸುತ್ತಿವೆ,

ಸ್ತನಯಿತ್ನು ಗತೋ ವಾಯುಃ, ಅಸ್ಯ ಸ್ತನಯಿತ್ನೋಃ ಸರ್ವಾಣಿ ಭೂತಾನಿ ಮಧು । ಬೃ ಉಪ 4, 5, 9.

ವ್ಯಷ್ಟಿ, ಸಮಷ್ಟಿ ಬೃಹಸ್ಪತಿ, ಬ್ರಹ್ಮಣಸ್ಪತಿ, ಮಹಾರಾಜ, ಅಶನಾ, ಪಿಪಾಸಾ, ಅನ್ನಾಯುಃ ಪರಾಯಣ, ಆಯತನ –ಮುಂತಾದ ನಾಮಗಳು ಚತುರ್ಮುಖ, ಭಾರತೀ ದೇವಿ, ರುದ್ರ ಮುಂತಾದ ದೇವತೆಗಳ ವಿಷಯದಲ್ಲಿ ವಾಯುದೇವನ ಪಾತ್ರವನ್ನು ಸಾರುತ್ತಿವೆ.

ಅಥ ಹೈನಂ ಮನ ಉವಾಚ ಯದಹ ಮಾಯತನಮಸ್ಮಿ

ತ್ವಂ ತದಾಯತನಮಸೀತಿ । ಛಾಂ,ಉಪ 5,1,10.

ಹೀಗೆ ಉಪನಿಷತ್ತುಗಳಲ್ಲಿ ಪ್ರಸ್ತುತಗಳಾಗಿರುವ ವಾಯುದೇವನ ದಶೋತ್ತರ ಶತ ನಾಮಗಳಲ್ಲಿ ಕೆಲವು ವಾಯುದೇವನಿಗಿಂತ ಉತ್ತಮನಾದವನು ಶ್ರೀವಿಷ್ಣು ಎಂದು ಸೂಚಿಸುತ್ತಿದ್ದರೆ, ಮತ್ತೆ ಕೆಲವು

ಸಾಕ್ಷಾತ್ತಾಗಿ ಅಥವಾ ಪರೋಕ್ಷವಾಗಿ ರುದ್ರಾದಿ ದೇವತೆಗಳಿಗಿಂತೆಲ್ಲ ವಾಯುದೇವನು ಹೇಗೆ ಉತ್ತಮನೆನಿಸಿರುವನೆಂಬುದನ್ನು ತಿಳಿಸುತ್ತಿವೆ.

ವಾಯುದೇವ ಮತ್ತು ಚತುರ್ಮುಖ – ವಾಯುದೇವನು ಮೊದಲು ಜನಿಸಿದವನು ಎಂದು ತಿಳಿಸುವ 'ಅಗ್ನಿ'–ಎಂಬ ನಾಮವನ್ನು, ಅನ್ನಾಭಿಮಾನಿಯಾದ ಚತುರ್ಮುಖನಿಗೂ, ಅಯುಷ್ಯವನ್ನು ನೀಡುವವನು ವಾಯುದೇವನೆಂದು ತಿಳಿಸುವ "ಅನ್ನಾಯು"–ಎಂಬ ನಾಮವನ್ನು, ವಾಯುದೇವನ ಪ್ರವೇಶವಾದಾಗಲೇ ಚತುರ್ಮುಖನ ದೇಹ ಎದ್ದು ನಿಂತಿರುವ ಆಖ್ಯಾಯಿಕೆಗೆ ಸಂಬಂಧಪಡುವ ಉಕ್ಥ ಮುಂತಾದ ನಾಮಗಳನ್ನು ಪರಿಶೀಲಿಸುವಾಗ–ವಾಯುದೇವ ಚತುರ್ಮುಖ ನಿಗಿಂತಲೂ ಹಿರಿಯನೇನೋ ಎಂಬ ಸಂದೇಹ ಸಹಜ, ಆದರೆ ಧರ್ಮ ನಾಮಕನಾಗಿ "ಅಶನಾ" "ಪಿಪಾಸಾ" 'ಅಪಾನ' ನಾಮಕನಾಗಿ ವಾಯುದೇವ ಚತುರ್ಮುಖನ ಅಂಗಗಳಿಂದ ಅಭಿವ್ಯಕ್ತನಾದದ್ದೂ ಇದೆ. ಇದರಿಂದ ವಾಯುದೇವನ ಅಭಿವ್ಯಕ್ತಿಗೆ ಕಾರಣನಾದ ಚತುರ್ಮುಖನೇ ವಾಯುದೇವನಿಗಿಂತ ಹಿರಿಯನೇ?–ಎಂಬ ಸಂಶಯವೂ ಬಾರದಿರದು.

ಶ್ರೀಮದಾಚಾರ್ಯರು ಅಲ್ಲಲ್ಲಿ ಉಲ್ಲೇಖಿಸಿರುವ ಪ್ರಮಾಣಗಳನ್ನು ವಿಮರ್ಶಿಸಿದಾಗ ವಾಯುದೇವ ಮತ್ತು ಚತುರ್ಮುಖ ಇವರಿಬ್ಬರ ವೈಷಮ್ಯ ಸಾಮ್ಯಗಳು ಸ್ಪಷ್ಟವಾಗಬಲ್ಲವು.

ಶ್ರೀಹರಿಯ ಬಳಿಕ ಉಳಿದೆಲ್ಲ ದೇವತೆಗಳಲ್ಲಿ ಪ್ರಾಣದೇವನೇ ಶ್ರೇಷ್ಠ ಎಂದು ಸಾರುತ್ತಿರುವ 'ನಾರಾಯಣಶ್ರುತಿ'ಯು ಚತುರ್ಮುಖನು ಪ್ರಾಣದೇವನಿಗಿಂತಲೂ ಉತ್ತಮನಾದವನಲ್ಲವೇ? ಎಂಬ ಸಂದೇಹವನ್ನು ಪರಿಹರಿಸುತ್ತ, ಚತುರ್ಮುಖನಿಗೂ ಪ್ರಾಣದೇವನಿಗೂ ಯಾವುದೇ ಬಗೆಯ ವಿಶೇಷವಿಲ್ಲ. ಅದುದರಿಂದ ವಾಯುದೇವನಿಗೆ ಹೇಳಿದ ದೇವೋತ್ತಮತ್ವವು ಚತುರ್ಮುಖನಿಗೂ ಹೇಳಿದಂತಾಯಿತೆಂದು ಅಭಿಪ್ರಾಯಪಟ್ಟಿದೆ.

ಉತ್ತಮಃ ಸರ್ವದೇವೇಷು ಪ್ರಾಣ ಏವ ಹರೇರನು ।
ಚತುರ್ಮುಖಸ್ಯ ಪ್ರಾಣಸ್ಯ ನ ವಿಶೇಷೋಽಸ್ತಿ ಕಶ್ಚನ । ಬೃ,ಉಪ,ಭಾ 3.6.28)

ವಾಯುದೇವ ಮತ್ತು ಚತುರ್ಮುಖ ಜೊತೆಗೇ ಪ್ರಾದುರ್ಭವಿಸುವರೆಂಬುದನ್ನು ಒಪ್ಪಿಕೊಳ್ಳುವ 'ಬ್ರಹ್ಮತರ್ಕ' ಚತುರ್ಮುಖನಿಗೆ ಈಗ ಏರಿರುವ ಪದವೀ ಪ್ರಯುಕ್ತವಾದ ಪ್ರಾಧಾನ್ಯ ಇರುವುದರಿಂದ ಕೆಲವು ಕಡೆ ಮೊದಲು ಚತುರ್ಮುಖನೇ ಪ್ರಾದುರ್ಭೂತನಾದವನೆಂದೂ, ಬ್ರಹ್ಮಪದವಿಯನ್ನು ವಾಯುದೇವ ನಿಯತವಾಗಿ ಹೊಂದುವವ ನಾದುದರಿಂದ ಮತ್ತೆ ಕೆಲವೆಡೆ ವಾಯುದೇವನೇ ಮೊದಲು ಪ್ರಾದುರ್ಭವಿಸಿದವನೆಂದೂ ಉಲ್ಲೇಖ ಬಂದಿರುವುದೆಂದು ತಿಳಿಸುತ್ತಿದೆ.

ವಾಯುರೇವ ಯತೋ ಬ್ರಹ್ಮಪದಂ ನಿಯಮತೋ ವ್ರಜೇತ್ ।
ಸಹೈವ ಜನನೇಪ್ಯಸ್ಮಾತ್ ಪೂರ್ವಂ ವಾಯೋರ್ಜನಿಂ ವದೇತ್ ।
ಕ್ವಚಿತ್ತು ಬ್ರಹ್ಮಣಃ ಪೂರ್ವಪ್ರಾಧಾನ್ಯಾತ್ ತತ್ಪದಸ್ಯ ಚ ॥ ಬೃ,ಉಪ,ಭಾ 3.2.2.)

ಇದರಿಂದ ಚತುರ್ಮುಖನಲ್ಲಿ ವಾಯುದೇವನಿಗಿಂತ ಪದವೀ ಪ್ರಯುಕ್ತವಾದ ಪ್ರಾಧಾನ್ಯ ಇದ್ದೇ ಇದೆ–ಎಂದೂ ಸೂಚಿಸಿದಂತಾಗುವುದು.

ಚತುರ್ಮುಖನ ದೇಹದಿಂದ ಯಾವ ಇಂದ್ರಿಯಾಭಿಮಾನಿ ಹೊರಟಾಗ ಆ ದೇಹ ಪತಿತವಾಗುವುದೋ, ಯಾರು ಪ್ರವೇಶಿಸಿದಾಗ ಆ ಶರೀರ ಎದ್ದು ನಿಲ್ಲುವುದೋ–ಅವನೇ ಶ್ರೇಷ್ಠದೇವತೆ ಎಂದು ತೀರ್ಮಾನಿಸಿದ ದೇವತೆಗಳ ಬಲಪರೀಕ್ಷೆಗೆ ಅನುವು ಮಾಡಿ ಕೊಡುವುದಕ್ಕಾಗಿ, ಶ್ರೀ ಹರಿ ಮತ್ತು ಚತುರ್ಮುಖರು ಆ ಸಂದರ್ಭದಲ್ಲಿ ಆ ಶರೀರದ ಬಗ್ಗೆ ಉದಾಸೀನರಂತೆ ನಡೆದು ಕೊಂಡಿದ್ದರೆಂದು ತಿಳಿಸುವ ಪ್ರಮಾಣದಿಂದಲೂ ಸಿದ್ಧವಾಗುತ್ತದೆ.

ಉದಾಸೀನವದಾಸ್ತಾಂ ತೌ ಕೇಶವಾಶ್ಚಾಜ್ಜಸಂಭವಃ ।
ತೇಷಾಂ ಬಲಪರೀಕ್ಷಾರ್ಥಂ ವಾಯ್ವಾದೀನಾಂ ಸಮಸ್ತಶಃ । ಐ, ಉಪ, ಭಾ. 1. 4 .7

ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಲ್ಪಡುವ ಆ ಆಖ್ಯಾಯಿಕೆಗೆ ರುದ್ರಾದಿ ದೇವತೆಗಳಿಗಿಂತ ಮುಖ್ಯ ಪ್ರಾಣನು ಶ್ರೇಷ್ಠನೆಂದು ತೋರಿಸುವ ಉದ್ದೇಶವೇ ಹೊರತು, ಹರಿ ಮತ್ತು ಚತುರ್ಮುಖನಿಗಿಂತಲೂ ಅವನು ಉತ್ತಮನೆಂದು ಪ್ರತಿಪಾದಿಸುವ ಅಭಿಪ್ರಾಯವಲ್ಲ–ಎಂದು ಸ್ಪಷ್ಟವಾಗುವುದು.

ಐತರೇಯೋಪನಿಷತ್ತಿನಲ್ಲಿ ಬರುವ ವಾಯುದೇವನ 'ಅನ್ನಾಯು' ಎಂಬ ನಾಮದ ಅರ್ಥವನ್ನು ವಿವರಿಸುತ್ತ. ಅನ್ನದೇವನಾದ ಚತುರ್ಮುಖನಿಗೂ, ವಾಯುದೇವ ಆಯು ಶಬ್ದ ವಾಚ್ಯವಾದ ಆಯುಷ್ಯ, ಚಟುವಟಿಕೆ, ಜ್ಞಾನಾದಿಗಳನ್ನು ನೀಡುವನೆಂದು ತಿಳಿಸುವ. ಐತರೇಯ ಸಂಹಿತೆ, ಹಾಗಾದರೆ ಚತುರ್ಮುಖನಿಗಿಂತಲೂ ವಾಯುದೇವ ಶ್ರೇಷ್ಠ ಎಂದಾಯಿತಲ್ಲ ಎಂಬ ಸಂದೇಹವನ್ನು ಪರಿಹರಿಸುತ್ತ, ಅವರಿಬ್ಬರೂ ತಮ್ಮಲ್ಲಿ ಅನ್ಯೋನ್ಯವಾಗಿ ಗುಣಗಳನ್ನು ನೀಡುತ್ತಿರುವವರಾಗಿ ಸಮಾನರೆನಿಸಿದ್ದಾರೆ. ಮೋಕ್ಷಸುಖದಲ್ಲಿ, ಜ್ಞಾನದಲ್ಲಿ, ಹಾಗೂ ವಿಷ್ಣು ಭಕ್ತ್ಯಾದಿಗಳಲ್ಲಿ ರುದ್ರಾದಿ ಗಳಿಗಿಂತೆಲ್ಲ ಅಧಿಕರಾಗಿದ್ದು, ಪರಸ್ಪರವಾಗಿ ಸಮಾನರಾಗಿರುವರೆಂದು ಸ್ಪಷ್ಟೀಕರಿಸಿದೆ.

> ಅನ್ನದೇವಸ್ಯ ಚಾಯುಃ ಸ ತಸ್ಮಾದ್ದೇವೋತ್ತಮೋ ಮರುತ್।
> ಆಯುಃ ಶಬ್ದೋ ಜ್ಞಾನವಾಚೀ ಗತಿವಾಚೀ ಚ ಯತ್ ತತಃ ।
> ಚೇಷ್ಟಾ ಮೋಕ್ಷಜ್ಞಾನದಾತಾ ಸುರಾಣಾಂ ಮಾರುತಸ್ತತಃ ।
> ಅನ್ಯೋನ್ಯ ಗುಣದಾತೃತ್ವಾತ್ ಸಮಾನೌ ಬ್ರಹ್ಮಮಾರುತೌ ।
> ತಸ್ಮಾನ್ಮೋಕ್ಷಸುಖೆ ಜ್ಞಾನೆ ವಿಷ್ಣುಭಕ್ತ್ಯಾದಿಕೇಷು ಚ ।

ಸರ್ವೇಭ್ಯಶ್ಚಾಧಿಕೌ ತೌ ಹಿ ॥ ಐ ,ಉಪ, ಭಾ. 2. 3. 3. 6)

"ಸಂಧಾನ" ಎಂಬ ಗ್ರಂಥದಲ್ಲಿ ಅನ್ನಾಭಿಮಾನಿಯಾದ ಚತುರ್ಮುಖನೂ, ಪ್ರಾಣದೇವನೂ ದೇಹದಲ್ಲಿ ಅನ್ಯೋನ್ಯವಾಗಿ ಪ್ರವೇಶ ಮಾಡಿದಾಗಲೇ ಸುಸ್ಥಿತಿಯಲ್ಲಿರುತ್ತಾರೆಂದು ತಿಳಿಸಿ ವಾಯುದೇವ ನಿಲ್ಲದ ಚತುರ್ಮುಖನ ದೇಹ ದುರ್ಗಂಧವನ್ನು ಹೊಂದಿದರೆ, ಚತುರ್ಮುಖನಿಲ್ಲದ ವಾಯುದೇವನ ಶರೀರ ಒಣಗಿ ಹೋಗುವುದು–ಎಂದು ಸಮರ್ಥಿಸಲಾಗಿದೆ. ಬ್ರಹ್ಮನು ವಾಸಸ್ಥಾನ ಎನಿಸಿದರೆ, ಮುಖ್ಯಪ್ರಾಣನು ಸುಖವನ್ನು ಕೊಡುವವ ನೆನಿಸಿರುವನು. ಆದ್ದರಿಂದ ಅನ್ಯೋನ್ಯ ಪ್ರವೇಶದಿಂದ ಇಬ್ಬರಿಗೂ ಪ್ರಯೋಜನವಿದೆ ಎಂದೂ ತಿಳಿಸಲಾಗಿದೆ.

> ಅನ್ನಾಭಿಮಾನೀ ಬ್ರಹ್ಮೈವ ಪ್ರಾಣೋ ವಾಯುರುದಾಹೃತಃ।
> ಅನ್ಯೋನ್ಯಾನುಪ್ರವಿಷ್ಟೌ ತೌ ಸರ್ವದೈವ ಸುಸಂಸ್ಥಿತೌ ।
> ವಾಯುಂ ವಿನಾ ಬ್ರಹ್ಮಣೋಽಪಿ ಶರೀರಂ ಪೂತಿಮೇಷ್ಯತಿ।
> ವಾಯುಶ್ಚ ಶೋಷಮಾಯಾತಿ ವಿನಾ ಬ್ರಹ್ಮಾಣ ಮಂಜಸಾ।
> ––ಬ್ರಹ್ಮಾ ನೇವೇಶನೀಯಃ ಸ್ಯಾದ್ವಾಯುಶ್ಚಾಸ್ಯ ರತಿಪ್ರದಃ ।
> ಅತಃ ಪ್ರಯೋಜನಂ ತುಲ್ಯಮನ್ಯೋನ್ಯಾತ್ಮ ಪ್ರವೇಶನಾತ್ ॥
> ಬೃ, ಉಪ, ಭಾ 7,14,1.

ಹೀಗೆ ವಾಯುದೇವ ಹಾಗೂ ಚತುರ್ಮುಖರು ಸಮಾನರು. ಚತುರ್ಮುಖನಿಗೆ ಪ್ರಕೃತ ಏರಿರುವ ಪದವಿಪ್ರಯುಕ್ತವಾದ ಪ್ರಧಾನ್ಯ ಇದೆ. ಆದರೆ ವಾಯುದೇವನೂ ಮುಂದೆ ಅಂತಹ ಪದವಿಯನ್ನು ನಿಯತವಾಗಿ ಏರಲಿರುವುದರುಂದ ಆ ಪ್ರಾಧಾನ್ಯವೇನೂ

ಅಷ್ಟೊಂದು ಉಲ್ಲೇಖಾರ್ಹವೆನಿಸುವುದಿಲ್ಲ.

ದಶೋತ್ತರ ಶತನಾಮಗಳು: ವಾಯುದೇವನು ವೈದಿಕವಾಙ್ಮಯದ ವಿಷ್ಣು ಹಾಗೂ ಲಕ್ಷ್ಮೀ ವಾಚಕಗಳೆಂದು ಪ್ರಸಿದ್ಧಗಳಾದ ಶಬ್ದಗಳನ್ನು ಬಿಟ್ಟು ಉಳಿದೆಲ್ಲ ಶಬ್ದಗಳಿಂದ ಪ್ರತಿಪಾದ್ಯನಾಗಿರುವನು.

ಸರ್ವ ಶಬ್ದೋದಿತೌ ತಸ್ಮಾತ್ ಏತೌ ದ್ವಾವೇವ ನಾಪರಃ । ಬೃ, ಉಪ, ಭಾ.7.14.1.

ಶ್ರಿಯೋ ವಾಯುರಪಿ ನ ನಾರಾಯಣಾದಿ ನಾಮವತ್ತ್ವಂ । ಐ, ಉಪ, ಭಾ.

ಭಗವಂತನು ಹೇಗೆ ಮುಖ್ಯ ವೃತ್ತಿಯಿಂದ ಪ್ರತಿಪಾದ್ಯನಾಗಿರುವನೋ ಹಾಗೆ ಪ್ರತಿಪಾದ ನಲ್ಲದಿದ್ದರೂ, ರುದ್ರಾದಿಗಳಿಗಿಂತೆಲ್ಲ ಅಧಿಕವಾಗಿ ಆಯಾ ಶಬ್ದಪ್ರತಿಪಾದ್ಯ ಎನಿಸಿರುವನು....

ತಸ್ಯೈವ ಮುಖ್ಯನಾಮಾನಿ ಸಮಾಕೃಷ್ಯೇತರೇಷ್ವಪಿ ।
ಉಪಚಾರಾತ್ ಪ್ರವರ್ತಂತೇ ವ್ಯವಹಾರಪ್ರಸಿದ್ಧಯೆ ।
ತಥೈವ ಸರ್ವನಾಮಾನಿ ಪ್ರವರ್ತಂತೇ ಚ ಮಾರುತೇ ।
ನ ತಾವನ್ಮುಖ್ಯವೃತ್ತೈವ ಮುಖ್ಯತೋಽನ್ಯವ್ಯಪೇಕ್ಷಯಾ ।

ಅನ್ಯವ್ಯಪೇಕ್ಷಯಾ ವಾಯೌ ಮುಖ್ಯವೃತ್ತಿರ್ವಿಧೀಯತೇ ॥ ಐ, ಉಪ, ಭಾ 2, 1, 2, 12.

ದೇವತೆಗಳ ಇಂದ್ರ, ಬೃಹಸ್ಪತಿ, ಶಂಭು, ಮುಂತಾದ ನಾಮಗಳೆಲ ಮುಖ್ಯವಾಗಿ ಪ್ರಾಣ ವಾಚಕಗಳು; ಅಂತಹ ಪ್ರಾಣನಲ್ಲಿ ಉದ್ಗೀಥ ನಾಮಕ ಭಗವಂತನ ಉಪಾಸನೆಯನ್ನು ನಡೆಸಿ, ದೇವತೆಗಳು ಆಯಾ ನಾಮಗಳನ್ನು ಪಡೆದಿರುವರು.

ಅಸ್ಯೋಪಾಸನಯಾ ದೇವಾಃ ಸರ್ವೇ ನಾಮಾನಿ ಭೇಜಿರೇ ।
ಇಂದ್ರೋ ಬೃಹಸ್ಪತಿಃ ಶಂಭುರಿತ್ಯಾದ್ಯಾಃ ಪ್ರಾಣಗಾ ಯತಃ ॥ ಛಾಂ, ಉಪ, ಭಾ 1. 2. 1.)

ಹೀಗೆ ಎಲ್ಲ ವೈದಿಕಶಬ್ದಗಳೂ ವಾಯುದೇವನ ನಾಮಗಳೇ ಆಗಿರುವವಾದರೂ, ಉಪನಿಷತ್ತುಗಳಲ್ಲಿ ಅಲ್ಲಲ್ಲಿ ವಾಯುದೇವನ ನಾಮಗಳಾಗಿ ಉಲ್ಲೇಖಿಸಲ್ಪಟ್ಟಿರುವ ನೂರಾಹತ್ತು ನಾಮಗಳು ಉಪನಿಷತ್ತುಗಳಲ್ಲಿ ಉಲ್ಲೇಖಿಸಲ್ಪಟ್ಟವುಗಳೆಂಬ ವೈಶಿಷ್ಟ್ಯ ವನ್ನಲ್ಲದೆ, ಕೆಲವು ಇಂದ್ರಿಯಾಭಿಮಾನಿ ದೇವತೆಗಳಿಂದ ವಾಯುದೇವನೆದುರು ಉಲ್ಲೇಖಿಸಲ್ಪಟ್ಟವುಗಳೆಂಬ, ಮತ್ತೆ ಕೆಲವು ವಾಯುದೇವನ ಉಪಾಸನೆಗೆ ವಿಷಯವಾಗಿ ಉಲ್ಲೇಖಿಸಲ್ಪಟ್ಟವುಗಳೆಂಬ ವೈಶಿಷ್ಟ್ಯವನ್ನೂ ಒಳಗೂಂಡಿವೆ. ಅಂತಹವುಗಳ ಉಲ್ಲೇಖದೊಂದಿಗೆ ಶ್ರೀಮುಖ್ಯಪ್ರಾಣನ ಉಪಾಸನೆಯನ್ನು ನಡೆಸುವಂತಾಗಬೇಕು. ಒಂದೊಂದೇ ನಾಮವನ್ನು ಉಲ್ಲೇಖಿಸುವಾಗ ಅದಕ್ಕೆ ಸಂಬಂಧಪಡುವ ಮುಖ್ಯಪ್ರಾಣನ ಮಹಿಮೆಗಳನ್ನು ಮೆಲುಕು ಹಾಕುವಂತಾಗಬೇಕು. ಹೀಗೆ ಉಪನಿಷತ್ತುಗಳಲ್ಲಿ ಪ್ರಸ್ತುತವಾದ ವಾಯುದೇವನ ವ್ಯಕ್ತಿತ್ವವನ್ನು ಸಮಗ್ರವಾಗಿ ಮನನ ಮಾಡುವಂತಾಗಬೇಕು.

**ಪರಾಮರ್ಶಿಸಿದ ಗ್ರಂಥಗಳು**


1. ಅಥರ್ವಣೋಪನಿಷತ್ +ಭಾಷ್ಯ, ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
2. ಅನುವ್ಯಾಖ್ಯಾನ ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
3. ಈಶಾವಾಸ್ಯೋಪನಿಷತ್+ಭಾಷ್ಯ, ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
4. ಋಗ್ವೇದ
5. ಐತರೇಯೋಪನಿಷತ್+ಭಾಷ್ಯ. ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
6. ಕಾಠಕೋಪನಿಷತ್+ಭಾಷ್ಯ. ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
7. ಛಾಂದೋಗ್ಯೋಪನಿಷತ್+ಭಾಷ್ಯ ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ .
8. ಭಾವಭೋಧ
9. ಷಟ್ಪ್ರಶ್ನೋಪನಿಷತ್+ಭಾಷ್ಯ, ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
10. ಬೃಹದಾರಣ್ಯಕೋಪನಿಷತ್+ಭಾಷ್ಯ. ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
11. ಭಾಗವತತಾತ್ಪರ್ಯನಿರ್ಣಯ ಶ್ರೀಮಧ್ವಾಚಾರ್ಯಃ ಪೂರ್ಣಪ್ರಜ್ಞ ದರ್ಶನ
12. ತಾಮ್ರಪರ್ಣೀಯ.
13. ಶ್ರೀಬನ್ನಂಜೆ ಗೋವಿಂದಾಚಾರ್ಯರ ಸರ್ವಮೂಲದ ಭಾಷಾಂತರ ಟಿಪ್ಪಣಿ
14. ದಶೋಪನಿಷತ್ ಖಂಡಾರ್ಥ – ಶ್ರೀರಾಘವೇಂದ್ರ ತೀರ್ಥ.


**ಸಂಕೇತಾಕ್ಷರಗಳ ಪಟ್ಟಿ**

ಭಾಗ – ಭಾಗವತಂ.
ಭಾ, ತಾ, ನಿ – ಭಾಗವತ ತಾತ್ಪರ್ಯ ನಿರ್ಣಯ.
ಭಾ, ತಾ, ನಿ, ಟೀ – ಭಾಗವತ ನಿರ್ಣಯ ಟೀಕಾ.
ಛಾ, ಉಪ – ಛಾಂದೋಗ್ಯೋಪನಿಷತ್ತು.
ಛಾಂ, ಉಪ, ಭಾ – ಛಾಂದೋಗ್ಯೋಪನಿಷತ್ ಭಾಷ್ಯ.
ಛಾಂ, ಉಪ, ಖಂ – ಛಾಂದೋಗ್ಯ ಉಪನಿಷತ್ ಖಂಡಾರ್ಥ.
ತೈ, ಉಪ – ತೈತ್ತಿರೀಯ ಉಪನಿಷತ್.
ತೈ. ಉಪ, ಭಾ – ತೈತ್ತಿರೀಯ ಉಪನಿಷತ್ ಭಾಷ್ಯ.
ತೈ. ಉಪ ಖಂಡಾರ್ಥ – ತೈತ್ತಿರೀಯ ಉಪನಿಷತ್ ಖಂಡಾರ್ಥ.
ಈ, ಉಪ – ಈಶಾವಾಸ್ಯ ಉಪನಿಷತ್.
ಈ. ಉಪ, ಭಾ – ಈಶಾವಾಸ್ಯ ಉಪನಿಷತ್ ಭಾಷ್ಯ.
ಈ.ಉಪ. ಖಂಡಾರ್ಥ – ಈಶಾವಾಸ್ಯೋಪನಿಷತ್ ಖಂಡಾರ್ಥ.
ಬೃ, ಉಪ – ಬೃಹದಾರಣ್ಯಕ ಉಪನಿಷತ್ತು.
ಬೃ. ಉಪ. ಭಾ – ಬೃಹದಾರಣ್ಯಕ ಉಪನಿಷತ್ ಭಾಷ್ಯ.
ಬೃ. ಉಪ ಖಂಡಾರ್ಥ – ಬೃಹದಾರಣ್ಯಕ ಉಪನಿಷತ್ ಖಂಡಾರ್ಥ.
ಷಟ್, ಉಪ, – ಷಟ್ ಪ್ರಶ್ನ ಉಪನಿಷತ್.
ಷಟ್, ಉಪ, ಭಾ – ಷಟ್ಪ್ರಶ್ನ ಉಪನಿಷತ್ ಭಾಷ್ಯ.
ಐ, ಉಪ – ಐತರೇಯ ಉಪನಿಷತ್.
ಐ. ಉಪ ಭಾ – ಐತರೇಯ ಉಪನಿಷತ್ ಭಾಷ್ಯ.
ಐ. ಉಪ ಖಂಡಾರ್ಥ – ಐತರೇಯ ಉಪನಿಷತ್ ಖಂಡಾರ್ಥ.
ಕಾ. ಉಪ – ಕಾಠಕ ಉಪನಿಷತ್.
ಕಾ.ಉಪ, ಭಾ – ಕಾಠಕ ಉಪನಿಷತ್ ಭಾಷ್ಯ.
ಋಗ್ಭಾಷ್ಯ